ಇಂಥ ಬಯಲ ತತ್ವಕ್ಕೆ ಅನಂತರದಲ್ಲಿ ಸ್ಥಾವರ ರೂಪ ಕೊಟ್ಟದ್ದು ಆಲಯವಾಗಿಸಿದ್ದು ನಿಲಯವಾಗಿಸಿದ್ದು ಶರಣ ಧರ್ಮದ ಜಂಗಮದಳಿವಿನ ಬೆಳವಣಿಗೆ.

ಶರಣರ ಬಯಲತತ್ವವೆಂಬುದು ಅರಿವಂ ಪೊಸೆಯಿಸುವ ಧಾರ್ಮಿಕ ವಿವೇಕ. ವೈಜ್ಞಾನಿಕ ಮನೋಧರ್ಮ. ಅಕಾಲ ಅರೂಪ ಅಪ್ರಮಾಣುಗಳ ಅನಂತತೆಯನ್ನು ಶೂನ್ಯವನ್ನು ಶೂನ್ಯದೊಳಗಿನ ಎಲ್ಲವನ್ನು ಇಲ್ಲವಾಗುವ ಎಲ್ಲವನ್ನು ವೇದ್ಯವಾಗಿಸುವುದು ಈ ಬಯಲ ತತ್ತ್ವ.

ಇಂಥ ಬಯಲತತ್ವವನ್ನು ಕುರಿತು ಹಲವು ಜನ ವಯನಕಾರರು ಅವರವರ ಅರಿವಿನ ಪರಿಧಿಯಲ್ಲಿ ಅರ್ಥೈಸಹೊರಟಿದ್ದಾರೆ. ಅಲ್ಲಮ ಪ್ರಭುಗಳು:

ಅರಿದೆನೆಂಬುದು ತಾ ಬಯಲು
ಅರಿಯೆನೆಂಬುದ ತಾ ಬಯಲು
ಅರುಹಿನ ಕುರುಹಿನ ಮರಹಿನೊಳಗೆ
ಗುಹೇಶ್ವರನೆಂಬುದು ತಾ ಬಯಲು.

ಎಂದು ಬಯಲ ಬಗ್ಗೆ ಮಾತನಾಡಿದ್ದಾರೆ. ಬಯಲಿನೊಳಗಿನ ವಸ್ತು ರೂಪಗಳನ್ನು ವಸ್ತುರೂಪಗಳ ಸ್ವೀಕರಣೆ ನಿರಾಕರಣೆಯ ಕ್ಷಣ ಭಂಗುರತೆಯನ್ನು ಆ ಮುಖೇನವಾಗಿಯಏ ಆಗುವ ಬಯಲಗುಣವನ್ನು ಗುಹೇಶ್ವರನಿಗೆ ಅದ್ವಯಗೊಳಿಸಿ ಮಾತನಾಡಿದ್ದಾರೆ. ಇದರ ಪರಿಭಾವನೆಯನ್ನು ಮತ್ತೊಂದು ವಚನದಲ್ಲಿ ಹೀಗೆ ನಿರ್ವಚಿಸಿದ್ದಾರೆ.

ವಸುಧೆಯಿಲ್ಲದ ಬೆಳಸು ರಾಜಾನ್ನ ಹೆಸರಿಲ್ಲದ
ಓಗರ
ವೃಷಭ ಮುಟ್ಟದ ಹಯನು
ಬೆಣ್ಣೆಯ ಹೊಸೆವರಿಲ್ಲದೆ ಕಂಡುಂಡೆ
ಶಿಶುಕಂಡ ಕನಸಿನಂತೆ, ಗುಹೇಶ್ವರನೆಂಬುದು
ಹೆಸರಿಲ್ಲದ ಬಯಲು.

ಕಾಣುವ ಅನುಭವಿಸುವ ವಸ್ತು-ಸತ್ತೆಗಳ ಮುಖೇನವೇ ಕಾಣದ ಕಾಣಲಾಗದ ಆದರೆ ಅದೇ ಅಂತಿಮವಾಗುವ ಬೆರಗನ್ನು ಹೀಗೆ ಮಾತ್ರ ಹೇಳದೆ ಗತ್ಯಂತರವಿಲ್ಲ. ಅಂದರೆ ಆ ಆತ್ಯಂತಿಕ ಮಹಾಸ್ಥಿತಿಯನ್ನು ನಿರ್ವಚಿಸಲು ಮನುಷ್ಯ ನಿರ್ಮಿತಿಯ ಸಂವಹನ ಗುಣಸೂಚಿಯಾದ ಭಾಷೆಗೆ ಶಕ್ತಿಯಿಲ್ಲ. ಈ ಅಂಶವನ್ನು ಶರಣ ಘಟ್ಟಿವಾಳಯ್ಯಗಳ ವಚನ ಹೀಗೆ ನಿರ್ವಚಿಸಿದೆ.

ಏನೆಂದೂ ಎನಲಿಲ್ಲ ನುಡಿದು ಹೇಳಲಿಕ್ಕಿಲ್ಲ
ನಿಜದಲ್ಲಿ ನಿಂದ ಬೆರಗ ಕುರುಹ ಹರಿವುದೆ
ಮರುಳೆ?
ಹರಿದು ಹತ್ತುವುದೆ ಮರುಳೆ ಬಯಲು
ಅದು ತನ್ನಲ್ಲಿ ತಾನಾದ ಬಯಲು, ತಾನಾದ
ಘನವು
ಇನ್ನೇನನರಸಲಿಲ್ಲ, ಅದು ಮುನ್ನವೆ ತಾನಿಲ್ಲ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.

ಹೀಗಾಗಿ ಬಯಲ ಬಗೆಯರಿತು ಬಯಲೆ ಆಗಿ ಬಾಳುವುದು ನಿಜವಾದ ಶರಣತ್ವ. ಇದು ನಿಸರ್ಗ ತತ್ವ. ಅದು ಬಿಟ್ಟು ಇಲ್ಲದ ಕರ್ಮಸಿದ್ಧಾಂತ ಪುನರ್ಜನ್ಮಗಳ ಗೊಂದಲಗಳಲ್ಲಿ ಬಯಲ ದೇಹವನ್ನು ಬಂಧನದೊಳಗಿಟ್ಟು ಶ್ರೇಷ್ಠ ನಿಕೃಷ್ಟತೆಯ ಆವರಣ ಕಟ್ಟಿಕೊಂಡು ಹೋಗುವುದು ಎಂದರೆ ಅದು ಬಯಲ ತತ್ವಕ್ಕೆ ವಿರೋಧಿಯಾದ ನಡೆ. ಬೌದ್ಧರ ಪ್ರಕ್ರಿಯಾ ಮೀಮಾಂಸೆಗೂ ತಾವೋನ ಶೂನ್ಯಕತ್ವಕ್ಕೂ ಶರಣರ ಬಯಲ ಮೀಮಾಂಸೆಗೂ ಇರುವ ಗುಣಧರ್ಮ. ಅದು ಬಯಲ ಗುಣಧರ್ಮ.

ಮಹಾ ಬಯಲ ಕಡಿದು ಎರಡು
ಮಾಡಿದೆನೆಂದಡೆ
ಆ ಬಯಲು ಎರಡಹುದೆ?
ಅಣುರೇಣು ಮಧ್ಯಗುಣಭರಿತೆ ಅಖಂಡ ಬ್ರಹ್ಮವ
ಪ್ರಾದೇಶಿಕ ಪರಿಚ್ಛಿನ್ನವೆಂದು ನುಡಿಯಲುಂಟೆ
ನಿಃಕಳಂಕ ಮಲ್ಲಿಕಾರ್ಜುನಾ?

ಎಂದು ಮೋಳಿಗೆಯ ಮಾರಯ್ಯಗಳು ತಮ್ಮ ಅದ್ವಯ ಜ್ಞಾನದಲ್ಲಿ ಬಯಲ ಬೆಳಗನ್ನು ಹೊಳೆಯಿಸಿದ್ದಾರೆ.

ಅರುವಿಂಗೆ ಅರ್ಚನೆ ಒಳಗು
ಅರ್ಚನೆಗೆ ಎಚ್ಚರೆ ನಿತ್ಯಕ್ಕೊಳಗು
ನಿತ್ಯತ್ವ ನಿಂದರೆ ಬಚ್ಚ ಬರಿಯ ಬಯಲು
ನಿಃಕಳಂಕ ಮಲ್ಲಿಕಾರ್ಜುನಾ.

●